# ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ರವರ ನ್ಯಾಯಾಲಯ, ಶೃಂಗೇರಿ

ಸಿ.ಸಿ. ನಂಃ **101/2022**

**ಫಿರ್ಯಾದುದಾರರು** ಃ ಎಸ್. ನಾಗೇಶ್ , ಬಿನ್. ಸಾಧು ಪೂಜಾರಿ,
ವಯಸ್ಸು ಸುಮಾರು **49** ವರ್ಷ, ವ್ಯವಹಾರಗಾರರು,
ವಾಸಃ ಸೆಂಕಾಪುರ, ಶೃಂಗೇರಿ,
ಶೃಂಗೇರಿ ತಾಲ್ಲೂಕು,
ಚಿಕ್ಕಮಗಳೂರು ಜಿಲ್ಲೆ.

**ಃವಿರುದ್ಧಃ**

**ಆರೋಪಿ** ಃ ಶ್ರೀಮತಿ ಸುಜಾತ, ಕೋಂ. ರಾಘವೇಂದ್ರ,
ವಯಸ್ಸು ಸುಮಾರು **35** ವರ್ಷ,
**ಸದರಿ ವಾಸಃ** ಮಹಮ್ಮದ್ ಮಜಾರ್ ,
ಗಂಧರ್ವ ಹೋಟಲ್ ಎದುರು,
ಭಾರತೀ ರಸ್ತೆ, ಶೃಂಗೇರಿ ಟೌನ್,
ಶೃಂಗೇರಿ ತಾಲ್ಲೂಕು.

*****

## ಆ ಪಾ ದ ನೆ

ಆರೋಪಿಯಾದ ನಿಮ್ಮ ವಿರುದ್ಧ ಫಿರ್ಯಾದುದಾರರು ದಾಖಲು ಮಾಡಿರುವ ಫಿರ್ಯಾದು ಏನೆಂದರೆ, ನೀವು ಮತ್ತು ನಿಮ್ಮ ಪತಿಗೆ ಫಿರ್ಯಾದುದಾರರು ಹಲವಾರು ವರ್ಷಗಳಿಂದ ಪರಿಚಿತರಾಗಿದ್ದು ನೀವು ಫಿರ್ಯಾದುದಾರರಿಂದ ನಿಮ್ಮ ತುರ್ತು ಅವಶ್ಯಕತೆಯ ಉದ್ದೇಶಕ್ಕಾಗಿ ಆಗಸ್ಟ್-2021 ರಲ್ಲಿ ಮುಂಗಡ ಹಣ ದಿನಾಂಕಃ20.08.2021 ರಂದು ರೂ.6,00,000/- ಗಳನ್ನು ಸಾಲವಾಗಿ ಪಡೆದಿದ್ದು ಸದರಿ ಸಾಲದ ಹಣವನ್ನು ಮರುಪಾವತಿಗಾಗಿ ಆರೋಪಿಯಾದ ನೀವು ಅದೇ ದಿನ ನಮೂದಿಸಿ ರೂ.6,00,000/- ಗಳನ್ನು ನಮೂದಿಸಿರುವ **457673** ನೇ ಚೆಕ್ ಸಂಖ್ಯೆಯ, ಯುನಿಯನ್ ಬ್ಯಾಂಕ್ ಆಫ್ ಇಂಡಿಯಾ(ಕಾರ್ಪೋರೇಷನ್ ಬ್ಯಾಂಕ್), ಶೃಂಗೇರಿ ಶಾಖೆಯ ಒಂದು ಚೆಕ್ಕನ್ನು ನೀಡಿ ನಗಧಿಕರಿಸಿಕೊಳ್ಳುವಂತೆ ತಿಳಿಸಿದ್ದು ಸದರಿಯವರು ದಿನಾಂಕಃ14/12/2021 ರಂದು

2-6-022

ಜಮಾವಣೆಗಾಗಿ ಯುನಿಯನ್ ಬ್ಯಾಂಕ್ ಆಫ್ ಇಂಡಿಯಾ, ಶೃಂಗೇರಿ ಶಾಖೆಗೆ ಹಾಜರುಪಡಿಸಿದಾಗ, ಬ್ಯಾಂಕಿನವರು ನಿಮ್ಮ ಖಾತೆಯಲ್ಲಿ ***Insufficient funds*** ವೆಂಬ ಷರಾದೊಂದಿಗೆ ದಿನಾಂಕಃ14/12/2021 ರಂದು ವಾಪಸ್ಸು ಮಾಡಿರುತ್ತಾರೆ ಹಾಗೂ ಈ ಬಗ್ಗೆ ನಿಮಗೆ ವಕೀಲರ ಮೂಲಕ ದಿನಾಂಕಃ20/12/2021 ರಂದು ನೋಟಿಸನ್ನು ನೀಡಿ, ಸದರಿ ನೋಟಿಸ್ ತಲುಪಿದ 15 ದಿನಗಳೊಳಗೆ ಹಣ ಮರುಪಾವತಿ ಮಾಡಬೇಕೆಂದು ತಿಳಿಸಿದರೂ ಸಹ ನೀವು ಆರೋಪಿ ಸದರಿ ಚೆಕ್ಕಿನ ಹಣವನ್ನು ಮರುಪಾವತಿ ಮಾಡಿರುವುದಿಲ್ಲ. ಆದ್ದರಿಂದ ನೀವು ಆರೋಪಿ ಫಿರ್ಯಾದುದಾರರಿಗೆ ಮೋಸ ಮಾಡಬೇಕೆನ್ನುವ ಉದ್ದೇಶದಿಂದ ಈ ರೀತಿಯ ಚೆಕ್ಕನ್ನು ನೀಡಿ ವರ್ಗಾವಣೆಯ ಲಿಖಿತ ಕಾಯ್ದೆ ಕಲಂ 138 ರ ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ಪ್ರಶ್ನೆ 1 ◌ಃ ಈಗ ಓದಿ ಹೇಳಿದ ಆಪಾದನೆ ತಿಳಿಯಿತೇ?

ಉತ್ತರ ◌ಃ ಅರ್ಥವಾಗಿದೆ

ಪ್ರಶ್ನೆ2 ◌ಃ ತಪ್ಪು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕಾ?

ಉತ್ತರಃ ವಿಚಾರಣೆಯಾಗಬೇಕು

ಈ ಮೇಲ್ಕಂಡ ಆಪಾದನೆಯನ್ನು ನಾನೇ ಸ್ವತಃ ಆರೋಪಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು ಮೇಲೆ ಹೇಳಿರುವುದು ಸತ್ಯ ಹಾಗೂ ಸರಿಯಾಗಿದೆ ಎಂದು ದೃಡೀಕರಿಸುತ್ತೇನೆ.

**ದಿನಾಂಕ ◌ಃ 07-06-2023**

Sd/-

(ದಾಸರಿ ಕ್ರಾಂತಿ ಕಿರಣ್)
**ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂ., ಶೃಂಗೇರಿ.**

ಆರೋಪಿಯ ಸಹಿಃ